1	2	3	4
306.	ಸಿ. ರಾಮನ್	5.3.73	30.12.94
307.	ಡಾ. ಎಸ್. ಮಣಿಮೇಗಾಲಯ	6.2.78	"
308.	ಕೆ.ಪಿ. ಕೃಷ್ಣಮೂರ್ತಿ	1.7.81	``
309.	ಎಂ. ಗುರುಬಸಮ	16.9.85	"
310.	ಕೆ. ರಮೇಶ್	6.11.84	``
311.	ಹೊನ್ನಪ್ಪ	6.7.85	"
312.	ಬಿ. ಶಂಕರಪ್ಪ	21.10.82	``

ಸೆಂಟ್ರಲ್ ಕೋಟಾದಿಂದ ಹೆಚ್ಚು ವಿದ್ಯುತ್ ಶಕ್ತಿ ಒದಗಿಸುವುದು

2163 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ. : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಸೆಂಟ್ರಲ್ ಕೋಟಾದಿಂದ ರಾಜ್ಯವು ಪಡೆಯುತ್ತಿರುವ ಶೇಕಜಾವಾರು ವಿದ್ಯುತ್ತು.

ಬಿ) ಸೆಂಟ್ರಲ್ ಕೋಟಾದಿಂದ ಹೆಚ್ಚು ವಿದ್ಯುತ್ತನ್ನು ಒದಗಿಸುವಂತೆ ರಾಜ್ಯವು ಕೇಂದ್ರವನ್ನು ಒತ್ತಾಯಿಸಿದೆಯೆ;

ಸಿ) ಹಾಗಿದ್ದರೆ, ಕೇಳಿದ ಹೆಚ್ಚುವರಿ ವಿದ್ಯುತ್ತಿನ ವಿವರ.

ಡಿ) ಸಧ್ಯದ ಪರಿಸ್ಥಿತಿ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಎ) ಮೂರು ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯವು ಪಡೆಯುತ್ತಿರುವ ಶೇಕಡಾವಾರು ವಿದ್ಯುತ್ತಿನ ವಿವರವು ಕೆಳಕಂಡಂತಿದೆ.

1) ರಾಮಗುಂಡಂ ಸೂಪರ್ ಥರ್ಮಲ್ ಪವರ್ ಸ್ಟೇಷನ್, ಆಂಧ್ರಪ್ರದೇಶ - ಶೇ. 16.4

2) ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಘಟಕ- 1 ಮತ್ತು 2, ತಮಿಳುನಾಡು - ಶೇ. 14.5

3) ಮದ್ರಾಸು ಅಟಾಮಿಕ್ ಪವರ್ ಪ್ಲಾಂಟ್, ತಮಿಳುನಾಡು - ಶೇ. 6.4

ಬಿ ಮತ್ತು ಸಿ) ಹೌದು, ರಾಜ್ಯವು ಎದುರಿಸುತ್ತಿರುವ ತೀವ್ರ ವಿದ್ಯುತ್ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆಯಾಗದಿರುವ ಶೇಕಡ 50ರಷ್ಟು ವಿದ್ಯುತ್ತನ್ನು ಹೆಚ್ಚುವರಿಯಾಗಿ ಹಂಚುವಂತೆ ರಾಜ್ಯ ಸರ್ಕಾರವು ಕೇಂದ್ರವನ್ನು ಒತ್ತಾಯಿಸಿದೆ.

ಡಿ) ಕೋರಲಾಗಿರುವ ಶೇಕಡ 50 ಹಂಚಿಕೆಯಾಗದ ವಿದ್ಯುತ್ತಿನ ಪೈಕಿ ಶೇಕಡ 15 ಮಾತ್ರ ರಾಜ್ಯವು ಪಡೆಯುತ್ತಿದೆ.

ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

2164 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಬಂಡವಾಳ ಹೂಡಿಕೆ ಯೋಜನೆಯನ್ನು ರಾಜ್ಯ ಸರ್ಕಾರವು ತಯಾರಿಸಿದೆಯೇ?

ಆ) ಹಾಗಿದ್ದಲ್ಲಿ, ಆ ಯೋಜನೆಯ ಅಂದಾಜು ವೆಚ್ಚವೆಷ್ಟು?

ಇ) ಅದರಲ್ಲಿ, ಖಾಸಗಿ ವಲಯದ ವಂತಿಕೆ ಎಷ್ಟು?

ಈ) ಮೇಲೆ ಹೇಳಿದ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿವೆಯೇ?

ಉ) ಕೇಂದ್ರ ಸರ್ಕಾವು ಅನುಮೋದನೆ ನೀಡಿದೆಯೇ?

ಊ) ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರವು ಗುರ್ತಿಸಿರುವ ಪ್ರವಾಸೋದ್ಯಮ ಸ್ಥಳಗಳು ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು.

ಆ) ರೂ. 847.36 ಕೋಟಿ.

ಇ) ರೂ. 668.93 ಕೋಟಿ.

ಈ) ಹೌದು.

ಉ) ಅವರ ಪರಿಶೀಲನೆಯಲ್ಲಿದೆ.

ಊ) 257 ಸ್ಥಳಗಳು.

ಸುರಪುರ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ

2165 - ಶ್ರೀ ರಾಜಾ ವೆಂಕಟಪ್ಪ ನಾಯಕ್ : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಸುರಪುರ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ. ಬಾಕಿ ಉಳಿಸಿಕೊಂಡಿರುವ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ.

(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಸಾಮಾನ್ಯ ರೈತರ ವಿವರ.)

ಬಿ) ವಿಳಂಬವಾಗುತ್ತಿರುವುದುಕ್ಕೆ ಕಾರಣಗಳು.